# ಭಕ್ತಿಯೋಗ

## ಸ್ವಾಮಿ ವಿವೇಕಾನಂದ

( ೧೮೯೬, ಜನವರಿ ೨೦ರಂದು ನ್ಯೂಯಾರ್ಕ್‌ನಲ್ಲಿ ನೀಡಿದ ತರಗತಿಯ ಉಪನ್ಯಾಸ—
ಜೆ.ಜೆ. ಗುಡ್ವಿನ್ ಅವರು ಬರೆದುಕೊಂಡಿದ್ದು, ಈಗ ಕನ್ನಡದಲ್ಲಿ ಪ್ರಥಮ ಬಾರಿಗೆ ಪ್ರಕಟವಾಗುತ್ತಿದೆ.)

ಎಲ್ಲ ಪೂಜಾ ಭಾವನೆಗಳೂ ಸರಿಯಾದವು, ಮತ್ತು ಒಳ್ಳೆಯವು ಎಂಬುದು ನಮಗೆ ಗೊತ್ತು. ಭಗವಂತನ ಪೂಜೆಯೇ ಭಕ್ತಿ ಎಂಬುದನ್ನೂ ನಾವು ನೋಡಿದೆವು. ಬೇರೆ ಯಾವ ದೇವತೆಯ ಪೂಜೆಯೂ ಭಕ್ತಿಯಲ್ಲ. ಆದರೆ ಭಗವಂತನನ್ನು ಅನೇಕ ರೂಪಗಳಲ್ಲಿ, ಅನೇಕ ಭಾವನೆಗಳ ಮೂಲಕ ಪೂಜಿಸಬಹುದು. ಈ ಎಲ್ಲ ಭಾವನೆಗಳೂ ಸರಿಯಾದವು ಮತ್ತು ಒಳ್ಳೆಯವು. ಆದರೆ ಒಂದು ತೊಂದರೆ ಇದೆ : ಇದನ್ನು ಒಪ್ಪಿಕೊಂಡು ಅನುಸರಿಸಿದ್ದೇ ಆದರೆ ನಮ್ಮ ಶಕ್ತಿಯೆಲ್ಲ ಬೇರೆ ಬೇರೆ ಕಡೆ ಹರಿದು ಹೋಗಿ ಏನನ್ನೂ ಸಾಧಿಸಿದಂತಾಗುವುದಿಲ್ಲ. ಉದಾರ ಮನಸ್ಸಿನವರ ಒಂದು ಪ್ರವೃತ್ತಿ ಏನೆಂದರೆ ಎಲ್ಲವನ್ನೂ ಅಭ್ಯಾಸ ಮಾಡಲು ಹೋಗಿ ಯಾವುದರಲ್ಲಿಯೂ ಪರಿಣತಿಯನ್ನು ಪಡೆಯದೆ ಇರುವುದು. ಈ ದೇಶದಲ್ಲಿ (ಅಮೆರಿಕದಲ್ಲಿ) ಅನೇಕ ವೇಳೆ ಇದೊಂದು ಜಾಡ್ಯವಾಗುತ್ತದೆ—ಎಲ್ಲವನ್ನೂ ಕೇಳುವುದು, ಯಾವುದನ್ನೂ ಮಾಡುವುದಿಲ್ಲ.

ನಮ್ಮ ಪುರಾತನ ಭಕ್ತನ ಬೋಧನೆ ಹೀಗಿದೆ : "ಎಲ್ಲ ಹೂವುಗಳಿಂದಲೂ ಮಕರಂದವನ್ನು ಹೀರಿ, ಎಲ್ಲರೊಡನೆಯೂ ಗೌರವದಿಂದ ಬೆರೆಯಿರಿ, ಎಲ್ಲರಿಗೂ 'ಹೌದು, ಹೌದು' ಎನ್ನಿ. ಆದರೆ ನಿಮ್ಮ ನೆಲೆಯಿಂದ ಮಾತ್ರ ಕದಲಬೇಡಿ." ಈ ರೀತಿ ನಿಮ್ಮ ನೆಲೆಯನ್ನು ಬಿಡದಿರುವುದೇ ನಿಷ್ಠೆ. ಇತರರ ಆದರ್ಶಗಳನ್ನು ದ್ವೇಷಿಸಬೇಕಾಗಿಲ್ಲ, ನಿಂದಿಸಬೇಕಾಗಿಲ್ಲ. ಎಲ್ಲವೂ ಯಥಾರ್ಥವಾದವುಗಳೇ. ಆದರೆ ಅದೇ ಸಂದರ್ಭದಲ್ಲಿ, ನಮ್ಮ ಆದರ್ಶವನ್ನು ಗಟ್ಟಿಯಾಗಿ ಹಿಡಿದುಕೊಂಡಿರಬೇಕು.

ರಾಮಭಕ್ತ ಹನುಮಂತನ ಒಂದು ಕಥೆಯಿದೆ... ಅವನ ಜೀವನಾವಧಿಯಲ್ಲಿಯೇ ರಾಮನು ಮತ್ತೆ ಕೃಷ್ಣನಾಗಿ ಅವತರಿಸಿದನು. ಯೋಗಿಯಾದ ಹನುಮಂತನಿಗೆ ದೇವರು ಪುನಃ ಶ್ರೀಕೃಷ್ಣನಾಗಿ ಅವತರಿಸಿರುವುದು ತಿಳಿದಿತ್ತು. ಅವನು ಬಂದು ಶ್ರೀಕೃಷ್ಣನ ಸೇವೆ ಮಾಡಿದನು. ಆದರೆ ಅವನಿಗೆ ಹೇಳಿದನು: "ನಾನು ನಿನ್ನ ರಾಮರೂಪವನ್ನು ನೋಡಲು ಇಚ್ಛಿಸುತ್ತೇನೆ" ಕೃಷ್ಣನು ಹೇಳಿದನು: "ಈ ರೂಪವೇ ಸಾಲದೆ? ನಾನೇ ಕೃಷ್ಣ, ನಾನೇ ರಾಮ. ಈ ಎಲ್ಲ ರೂಪಗಳೂ ನನ್ನವೇ." ಹನುಮಂತನು ಹೇಳಿದ : "ಅದು ನನಗೆ ಗೊತ್ತು. ಆದರೆ ನನಗೆ ರಾಮನ ರೂಪವೇ ಇಷ್ಟ. ಶ್ರೀನಾಥ ಮತ್ತು ಜಾನಕೀನಾಥ ಇಬ್ಬರೂ ಒಂದೇ. ಇಬ್ಬರೂ ಪರಮಾತ್ಮನ ಅವತಾರಗಳೇ. ಆದರೂ ಕಮಲಲೋಚನನಾದ ರಾಮನೇ ನನ್ನ ಸರ್ವಸ್ವ." ಇದು ಏಕನಿಷ್ಠೆ—ವಿವಿಧ ರೂಪದ ಪೂಜೆಗಳು ಸರಿಯೆಂದು ಗೊತ್ತಿದ್ದರೂ, ಒಂದಕ್ಕೇ ನಿಷ್ಠರಾಗಿದ್ದು, ಉಳಿದವನ್ನು ನಿರಾಕರಿಸುವುದು. ನಾವು ಇತರರನ್ನು ಪೂಜಿಸಕೂಡದು. ನಾವು ಅವರನ್ನು ದ್ವೇಷಿಸುವುದಾಗಲಿ ನಿಂದಿಸುವುದಾಗಲಿ ಮಾಡಕೂಡದು, ಆದರೆ ಗೌರವಿಸಬೇಕು...

---

**ಎಲ್ಲ ಧಾರ್ಮಿಕ ಭಾವನೆಗಳ ಕಡೆಗೂ ಮನಸ್ಸನ್ನು ಹರಿಸಿ ಶಕ್ತಿಯನ್ನು ವ್ಯಯಗೊಳಿಸಬಾರದು. ಕ್ರೈಸ್ತ, ಬೌದ್ಧ ಮುಂತಾದ ವಿವಿಧ ಆಧ್ಯಾತ್ಮಿಕ ಮಾರ್ಗಗಳನ್ನು ಅನುಸರಿಸಲು ಹೋಗಿ ಕೊನೆಗೆ ಯಾವುದೂ ಇಲ್ಲದಂತಾಗುತ್ತದೆ.**

---

ಗಿಡದ ಸುತ್ತ, ಪ್ರಾಣಿಗಳು ಅದನ್ನು ತಿನ್ನದಿರಲೆಂದು, ಬೇಲಿ ಕಟ್ಟಬೇಕು. ಆದರೆ ಅದು ಬೆಳೆದು ಹೆಮ್ಮರವಾದಮೇಲೆ ಯಾವ ಬೇಲಿಯ ಆವಶ್ಯಕತೆಯೂ ಇಲ್ಲ. ಹಾಗೆಯೇ ಆಧ್ಯಾತ್ಮಿಕತೆಯ ಬೀಜ ಬೆಳೆಯುತ್ತಿರುವಾಗ ಅದನ್ನು ಎಚ್ಚರಿಕೆಯಿಂದ ರಕ್ಷಿಸಬೇಕು. ಎಲ್ಲ ಧಾರ್ಮಿಕ ಭಾವನೆಗಳ ಕಡೆಗೂ ಮನಸ್ಸನ್ನು ಹರಿಸಿ ಶಕ್ತಿಯನ್ನು ವ್ಯಯಗೊಳಿಸಬಾರದು. ಕ್ರೈಸ್ತ, ಬೌದ್ಧ ಮುಂತಾದ ವಿವಿಧ ಆಧ್ಯಾತ್ಮಿಕ ಮಾರ್ಗಗಳನ್ನು ಅನುಸರಿಸಲು ಹೋಗಿ ಕೊನೆಗೆ ಯಾವುದೂ ಇಲ್ಲದಂತಾಗುತ್ತದೆ.

ಪ್ರಾರಂಭದ ಹಂತದಲ್ಲಿ ನಾವು ಮತೀಯರಾಗುವುದು ಅನಿವಾರ್ಯ. ಆದರೆ ಆ ಮತೀಯತೆ ಯಾರನ್ನೂ ನಿರಾಕರಿಸುವುದಾಗಿರಬಾರದು. ನಮ್ಮಲ್ಲಿ ಪ್ರತಿಯೊಬ್ಬರಿಗೂ ಒಂದೊಂದು ಮತವಿರಬೇಕು. ಆ ಮತವೇ ನಮ್ಮ ಇಷ್ಟ—ನಮ್ಮ ಆಯ್ಕೆಯ ಮಾರ್ಗ. ಆದರೆ ಆ ಆದರ್ಶವನ್ನು ಹಿಡಿದುಕೊಳ್ಳುವುದಕ್ಕಾಗಿ ನಾವು ಇತರರನ್ನು ನಾಶ ಮಾಡಬಾರದು. ನನ್ನ ಇಷ್ಟ ನನಗೆ ಪವಿತ್ರವಾದುದು—ಅದನ್ನು ನನ್ನ ಸಹೋದರನಿಗೂ ತಿಳಿಸುವಂತಿಲ್ಲ. ಪ್ರತಿಯೊಬ್ಬರಿಗೂ ಅವರವರ ಇಷ್ಟ ಪವಿತ್ರ. ಆದ್ದರಿಂದ ಆ ಇಷ್ಟವನ್ನು ನಿಮ್ಮದಾಗಿಯೇ ಇಟ್ಟುಕೊಳ್ಳಿ. ಪ್ರತಿಯೊಬ್ಬ ಸಾಧಕನೂ ಈ ಭಾವವನ್ನು ಅನುಸರಿಸಬೇಕು. ನಿಮ್ಮ ಇಷ್ಟದೇವತೆಯನ್ನು ಪ್ರಾರ್ಥಿಸುವಾಗ ಆ ದೇವತೆಯೊಂದೇ ನಿಮ್ಮ ಸರ್ವಸ್ವವಾಗಬೇಕು. ಭಗವಂತನ ಅನೇಕ ರೂಪಗಳಿರಬಹುದು, ಆದರೆ ಆ ಸಂದರ್ಭದಲ್ಲಿ ನಿಮ್ಮ ಇಷ್ಟದೇವತೆಯೊಂದೇ ನಿಮ್ಮ ಪಾಲಿಗಿರುವುದು.

ಈ ಇಷ್ಟಸಾಧನೆಯಲ್ಲಿ ತುಂಬ ಮುಂದುವರಿದಮೇಲೆ—ಆಧ್ಯಾತ್ಮಿಕ ಸಸಿಯು ಸಾಕಷ್ಟು ಬೆಳೆದ ಮೇಲೆ, ನಿಮ್ಮ ಅಂತರಂಗವು

ಬಲಿಷ್ಠವಾದ ಮೇಲೆ, ಮತ್ತು ನಿಮ್ಮ ಇಷ್ಟದೇವತೆಯೇ ಎಲ್ಲೆಲ್ಲಿಯೂ ಇರುವುದೆಂದು ಅರಿತಮೇಲೆ—ಸ್ವಾಭಾವಿಕವಾಗಿಯೇ ಈ ಎಲ್ಲ ಬಂಧನಗಳೂ ಕಳಚಿಬೀಳುವುವು. ಹಣ್ಣು ಗಳಿತಮೇಲೆ ತನ್ನ ಭಾರ ದಿಂದಲೇ ಕೆಳಕ್ಕೆ ಬೀಳುತ್ತದೆ. ನೀವು ಅಪಕ್ವವಾದ ಹಣ್ಣನ್ನು ಕಿತ್ತರೆ ಅದು ಹುಳಿಯಾಗಿರುತ್ತದೆ. ಆದ್ದರಿಂದ ನಾವು ಈ ಆಲೋಚನೆ ಯಲ್ಲಿ ಬೆಳೆಯಬೇಕು.

ಒಂದು ಭಾವನೆಯನ್ನು ತೆಗೆದುಕೊಳ್ಳಿ, ಒಂದು ಇಷ್ಟವನ್ನು ಸ್ವೀಕರಿಸಿ. ನಿಮ್ಮ ಇಡೀ ವ್ಯಕ್ತಿತ್ವವನ್ನು ಅದಕ್ಕೆ ಅರ್ಪಿಸಿ. ಪ್ರತಿಫಲ ದೊರೆಯುವವರೆಗೂ, ನಿಮ್ಮಾತ್ಮ ಬೆಳೆಯುವವರೆಗೂ ದಿನದಿನವೂ ಅದನ್ನೇ ಅಭ್ಯಾಸ ಮಾಡುತ್ತ ಹೋಗಿ. ಸಾಧನೆ ಪ್ರಾಮಾಣಿಕ ವಾಗಿದ್ದರೆ, ಸರಿಯಾಗಿದ್ದರೆ, ಆ ಇಷ್ಟವೇ ವಿಶಾಲವಾಗುತ್ತ ಹೋಗಿ ಇಡೀ ವಿಶ್ವವ್ಯಾಪಿಯಾಗುತ್ತದೆ. ಅದು ತಾನಾಗಿಯೇ ಬೆಳೆಯಲಿ, ಅದು ಒಳಗಿನಿಂದ ಹೊರಗೆ ಬೆಳೆಯುತ್ತದೆ. ಆಗ ನಿಮ್ಮ ಇಷ್ಟವೇ ಎಲ್ಲೆಲ್ಲಿಯೂ ಇದೆ, ಅದೇ ಎಲ್ಲವೂ ಆಗಿದೆ ಎಂದು ಹೇಳುತ್ತೀರಿ.

ಈ ನಿಷ್ಠಾಭಕ್ತಿಯ ಒಂದು ಅಪಾಯವೇ ಅದು ರಾಕ್ಷಸೀಯ ಮತಾಂಧತೆಯಾಗಿ ಪರಿಣಮಿಸುವುದು. ಪ್ರಪಂಚ ಇಂಥವರಿಂದ ತುಂಬಿ ಹೋಗುವುದು. ದ್ವೇಷಿಸುವುದು ಬಹಳ ಸುಲಭ. ಜನ ಸಾಮಾನ್ಯರು ಎಷ್ಟು ದುರ್ಬಲರಾಗಿರುತ್ತಾರೆಂದರೆ, ಒಬ್ಬನನ್ನು ಪ್ರೀತಿಸಬೇಕಾದರೆ ಮತ್ತೊಬ್ಬನನ್ನು ದ್ವೇಷಿಸುತ್ತಾರೆ. ಒಂದರಲ್ಲಿ ಅವರು ಶಕ್ತಿಯನ್ನು ಕೇಂದ್ರೀಕರಿಸಬೇಕಾದರೆ ಮತ್ತೊಂದರಿಂದ ಅದನ್ನು ತೆಗೆಯಬೇಕು. ಒಬ್ಬ ಪುರುಷನು ಒಬ್ಬಳು ಮಹಿಳೆಯನ್ನು ಪ್ರೀತಿಸುತ್ತಾನೆ; ಅನಂತರ ಮತ್ತೊಬ್ಬಳನ್ನು ಪ್ರೀತಿಸುತ್ತಾನೆ. ಹೀಗೆ ಮತ್ತೊಬ್ಬಳನ್ನು ಪ್ರೀತಿಸಬೇಕಾದರೆ ಮೊದಲಿನವಳನ್ನು ಅವನು ದ್ವೇಷಿಸಲೇಬೇಕು. ಸ್ತ್ರೀಯರ ವಿಷಯವೂ ಹೀಗೆಯೇ. ಈ ಲಕ್ಷಣ ನಮ್ಮ ಸ್ವಭಾವದಲ್ಲಿಯೇ ಇದೆ, ಆದ್ದರಿಂದ ಅದು ಧರ್ಮ ದಲ್ಲಿಯೂ ಇದೆ. ಅಪಕ್ವ ಮನಸ್ಸಿನ ಸಾಮಾನ್ಯ ವ್ಯಕ್ತಿಯು ಇನ್ನೊಬ್ಬನನ್ನು ದ್ವೇಷಿಸದೆ ಒಬ್ಬನನ್ನು ಪ್ರೀತಿಸಲಾರನು. ಈ ಲಕ್ಷಣವೇ ಧರ್ಮದಲ್ಲಿ ಮತಾಂಧತೆಯಾಗಿ ಕಾಣಿಸಿಕೊಳ್ಳುವುದು. ತಮ್ಮ ಆದರ್ಶವನ್ನು ಪ್ರೀತಿಸುವುದೆಂದರೆ ಇತರ ಎಲ್ಲ ಆದರ್ಶ ಗಳನ್ನೂ ದ್ವೇಷಿಸುವುದು.

ಇದನ್ನು ನಿವಾರಿಸಬೇಕು. ಇದೇ ಸಂದರ್ಭದಲ್ಲಿ ಬೇರೆ ಅಪಾಯವನ್ನೂ ನಿವಾರಿಸಬೇಕು. ನಮ್ಮ ಶಕ್ತಿಯನ್ನು ವೃಥಾ ವ್ಯಯ ಮಾಡಬಾರದು. ಹಾಗೆ ಮಾಡಿದರೆ ಧರ್ಮವೆಂದರೆ ನಮ್ಮ ಪಾಲಿಗೆ ಕೇವಲ ಉಪನ್ಯಾಸ ಕೇಳುವುದಾಗುತ್ತದೆ—ಅದಕ್ಕಿಂತ ಹೆಚ್ಚಲ್ಲ. ಇವು ಎರಡು ಅಪಾಯಗಳು. ಉದಾರ ಮನಸ್ಸಿನವರಲ್ಲಿ ವೈಶಾಲ್ಯತೆಯಿರುತ್ತದೆ, ತೀವ್ರತೆಯಿರುವುದಿಲ್ಲ. ಇತ್ತೀಚಿನ ದಿನ ಗಳಲ್ಲಿ ಧರ್ಮವು ತುಂಬ ವಿಶಾಲವಾಗುತ್ತಿದೆ. ಆದರೆ ಭಾವನೆಗಳು ವಿಶಾಲವಾದಷ್ಟೂ ಗಭೀರತೆಯನ್ನು ಕಳೆದುಕೊಳ್ಳುತ್ತವೆ. ಅನೇಕರಿಗೆ ಧರ್ಮವೆಂದರೆ ಸ್ವಲ್ಪ ದಾನಮಾಡುವುದು ಮತ್ತು ಶ್ರಮ ಪರಿಹಾರ ಕ್ಕಾಗಿ ಸ್ವಲ್ಪ ಮನರಂಜನೆಯನ್ನು ಪಡೆಯುವುದು—ಮನ ರಂಜನೆ ಗಾಗಿ ಅವರಿಗೆ ಐದು ನಿಮಿಷದ ಧರ್ಮ ಸಾಕು. ಉದಾರ ಭಾವನೆಯ ಅಪಾಯ ಇದು. ಇನ್ನೊಂದು ಕಡೆ ಮತೀಯ ಮನೋಭಾವದವರಲ್ಲಿ ಆಳವಿರುತ್ತದೆ, ತೀವ್ರತೆಯಿರುತ್ತದೆ, ಆದರೆ ಆ ತೀವ್ರತೆ ತುಂಬ ಸಂಕುಚಿತವಾಗಿರುತ್ತದೆ. ಅವರಲ್ಲಿ ಗಭೀರತೆ ಯಿದೆ, ಆದರೆ ವೈಶಾಲ್ಯತೆಯಿಲ್ಲ. ಅಷ್ಟೇ ಅಲ್ಲದೆ ಇದರ ಪರಿ ಣಾಮವಾಗಿ ಅವರು ಎಲ್ಲರನ್ನೂ ದ್ವೇಷಿಸುತ್ತಾರೆ.

---

ಅತ್ಯಂತ ಉದಾರಿಗಳಲ್ಲಿರುವ ವೈಶಾಲ್ಯತೆಯನ್ನೂ ಕ್ರೂರ ಮತಾಂಧರಲ್ಲಿರುವ ಗಭೀರತೆಯನ್ನೂ ಪಡೆಯಬೇಕು.

---

ಈ ಎರಡೂ ಅಪಾಯಗಳನ್ನು ನಿವಾರಿಸಿ, ಅತ್ಯಂತ ಉದಾರಿ ಗಳಲ್ಲಿರುವ ವೈಶಾಲ್ಯತೆಯನ್ನೂ ಕ್ರೂರ ಮತಾಂಧರಲ್ಲಿರುವ ಗಭೀರತೆಯನ್ನೂ ಪಡೆದಾಗ ಸಮಸ್ಯೆಯ ಪರಿಹಾರವಾಗುತ್ತದೆ. ಇದನ್ನು ಸಾಧಿಸುವುದು ಹೇಗೆ ಎಂಬುದು ಪ್ರಶ್ನೆ. ಇಷ್ಟ-ನಿಷ್ಠೆಯ ಸಿದ್ಧಾಂತವೇ ಅದಕ್ಕೆ ಮಾರ್ಗ. ಎಲ್ಲ ಆದರ್ಶಗಳೂ ಸತ್ಯ ಮತ್ತು ಯಥಾರ್ಥ ಎಂದು ತಿಳಿಯಬೇಕು; ಇವೆಲ್ಲವೂ ಒಂದೇ ದೇವರ ವಿವಿಧ ಮುಖಗಳು; ಆದರೆ ಈ ಎಲ್ಲ ರೂಪಗಳ ಮೂಲಕ ದೇವ ರನ್ನು ಪೂಜಿಸಲು ನಾವಿನ್ನೂ ಅಸಮರ್ಥರು; ಆದ್ದರಿಂದ ಒಂದು ಆದರ್ಶವನ್ನು ಹಿಡಿದುಕೊಂಡು, ಅದನ್ನೇ ನಮ್ಮ ಜೀವನ ಸರ್ವಸ್ವವನ್ನಾಗಿ ಮಾಡಿಕೊಳ್ಳಬೇಕು. ಇದರಲ್ಲಿ ನೀವು ಯಶಸ್ವಿ ಯಾದರೆ ಉಳಿದದ್ದೆಲ್ಲ ತಾನಾಗಿಯೇ ಬರುತ್ತದೆ.

ಮುಂದಿನ ಪಾಠವು ಪ್ರತೀಕಗಳಿಗೆ ಸಂಬಂಧಿಸಿದುದು. ದೇವ ರನ್ನು ಪೂಜಿಸುವುದೇ ಭಕ್ತಿ, ಇನ್ನಾರನ್ನಾದರೂ ಪೂಜಿಸುವುದು ಭಕ್ತಿ ಯಲ್ಲ. ಆದರೆ ಯಾವುದನ್ನಾದರೂ ದೇವರು ಎಂಬ ಭಾವದಿಂದ ಪೂಜಿಸಬಹುದು. ಅದನ್ನು ದೇವರು ಎಂದು ತಿಳಿಯದಿದ್ದರೆ ಆ ಪೂಜೆ ಭಕ್ತಿ ಎನಿಸುವುದಿಲ್ಲ. ಅದನ್ನು ದೇವರು ಎಂದು ಭಾವಿಸಿ ದರೆ ಅದು ಸರಿ.

ನದೀ ತೀರದ ಅರಣ್ಯಪ್ರದೇಶದಲ್ಲಿ ಯೋಗಿಯೊಬ್ಬನು ಧ್ಯಾನಾಭ್ಯಾಸ ಮಾಡುತ್ತಿದ್ದ. ಬಡ ಗೋಪಾಲಕನೊಬ್ಬನು ಅದೇ ಸ್ಥಳದಲ್ಲಿ ಹಸುಗಳನ್ನು ಮೇಯಿಸುತ್ತಿದ್ದ. ಪ್ರತಿದಿನವೂ ಆತ ಈ ಯೋಗಿಯು ಗಂಟೆಗಟ್ಟಳೆ ಧ್ಯಾನ ಮಾಡುವುದನ್ನೂ ತಪಸ್ಸು ಆಚರಿಸುವುದನ್ನೂ ಅಧ್ಯಯನ ಮಾಡುವುದನ್ನೂ ನೋಡುತ್ತಿದ್ದ. ಅವನು ಏನು ಮಾಡುತ್ತಾನೆ ಎಂಬುದನ್ನು ತಿಳಿಯುವ ಕುತೂಹಲ ವುಂಟಾಯಿತು ಗೋಪಾಲಕನಿಗೆ. ಅವನು ಯೋಗಿಯ ಹತ್ತಿರ ಬಂದು ಕೇಳಿದ: "ಸ್ವಾಮಿ, ದೇವರನ್ನು ಪಡೆಯುವ ಮಾರ್ಗವನ್ನು ನನಗೆ ಬೋಧಿಸುತ್ತೀರಾ?" ಆ ಯೋಗಿಯು ದೊಡ್ಡ ಪಂಡಿತನೂ ಶ್ರೇಷ್ಠ ವ್ಯಕ್ತಿಯೂ ಆಗಿದ್ದ. ಅವನು ಹೇಳಿದ: "ನೀನು ಸಾಮಾನ್ಯ ಗೋವಳ —ದೇವರನ್ನು ನೀನು ಹೇಗೆ ಅರ್ಥಮಾಡಿಕೊಳ್ಳಬಲ್ಲೆ? ದಡ್ಡ, ಸುಮ್ಮನೆ ಮನೆಗೆ ಹೋಗಿ ಹಸುವನ್ನು ಮೇಯಿಸಿಕೊಂಡಿರು. ಇಂಥ ವಿಷಯಗಳ ಬಗ್ಗೆ ತಲೆ ಕೆಡಿಸಿಕೊಳ್ಳಬೇಡ."

ಆ ಮನುಷ್ಯ ಹೊರಟುಹೋದ. ಆದರೆ ನಿಜವಾದ ಬಯಕೆ ಅವನಲ್ಲಿ ಜಾಗ್ರತವಾಯಿತು. ಅವನು ಸುಮ್ಮನಿರಲಾಗದೆ ಮತ್ತೆ ಯೋಗಿಯ ಹತ್ತಿರ ಬಂದು ಕೇಳುತ್ತಾನೆ: "ಸ್ವಾಮಿ, ದೇವರ ಬಗ್ಗೆ ನನಗೆ ಏನಾದರೂ ಹೇಳುತ್ತೀರಾ?" ಮತ್ತೆ ಅದೇ ನಿರಾಕರಣೆ : "ಆಹ್. ನೀನು ದಡ್ಡ, ದೇವರ ಬಗ್ಗೆ ನೀನು ಏನು ತಿಳಿಯಬಲ್ಲೆ? ಮನೆಗೆ ಹೋಗು." ಆದರೆ ಗೋಪಾಲಕನಿಗೆ ನಿದ್ರೆ ಮಾಡಲಾಗ ಲಿಲ್ಲ, ಊಟವೂ ರುಚಿಸಲಿಲ್ಲ. ತಾನು ದೇವರ ಬಗ್ಗೆ ತಿಳಿಯಲೇ ಬೇಕು ಎಂದೆನಿಸಿತು ಅವನಿಗೆ. ಅವನು ಮತ್ತೆ ಬಂದನು. ಅವ ನನ್ನು ಸುಮ್ಮನಾಗಿಸಲು ಯೋಗಿಯು ಹೇಳಿದ: "ಆಗಲಿ, ನಿನಗೆ ದೇವರನ್ನು ಬೋಧಿಸುತ್ತೇನೆ."

ಅವನು ಕೇಳಿದ: "ಸ್ವಾಮಿ, ದೇವರು ಎಂಥವನು? ಅವನ ರೂಪ ಯಾವುದು? ಅವನು ಹೇಗೆ ಕಾಣುತ್ತಾನೆ?"

ಯೋಗಿಯು ಹೇಳಿದ: "ದೇವರು ನಿನ್ನ ಹಸುವಿನ ಮಂದೆ ಯಲ್ಲಿರುವ ದೊಡ್ಡ ಬಸವನಂತಿದ್ದಾನೆ. ಅದೇ ದೇವರು. ದೇವರು ಆ ದೊಡ್ಡ ಬಸವನಾಗಿದ್ದಾನೆ." ಗೋಪಾಲಕನು ಅವನ ಮಾತನ್ನು ನಂಬಿ ಹಿಂತಿರುಗಿದ. ಆ ಬಸವನನ್ನೇ ದೇವರೆಂದು ತಿಳಿದು ಹಗಲು ರಾತ್ರಿ ಅದನ್ನು ಪೂಜಿಸತೊಡಗಿದ. ಒಳ್ಳೆಯ ಹಸಿರು ಹುಲ್ಲನ್ನು ಅದಕ್ಕೆ ತಿನಿಸಿದ, ಅದರ ಹತ್ತಿರವೇ ವಿಶ್ರಮಿಸುತ್ತಿದ್ದ, ಅದಕ್ಕೆ ಧೂಪ ದೀಪಗಳನ್ನು ಅರ್ಪಿಸಿದ ಮತ್ತು ಅದನ್ನೇ ಅನುಸರಿಸಿದ. ಹೀಗೆ ದಿನ ತಿಂಗಳು ವರ್ಷಗಳು ಉರುಳಿದವು. ಅವನ ಪೂರ್ಣ ಆತ್ಮವೇ ಆ ಬಸವನಲ್ಲಿ ನೆಲೆಗೊಂಡಿತ್ತು.

ಒಂದು ದಿನ ಅವನಿಗೆ ಒಂದು ಧ್ವನಿ ಕೇಳಿಸಿತು—ಅದು ಬಸವ ನೊಳಗಿನಿಂದ ಬರುತ್ತಿರುವುದನ್ನು ಗಮನಿಸಿದ. "ಬಸವ ಮಾತ ನಾಡುತ್ತಿರುವುದು!" ಎಂದು ಅವನು ಚಕಿತನಾದ.

"ವತ್ಸ, ವತ್ಸ."

"ಏನು ಬಸವ ಮಾತನಾಡುತ್ತಿರುವುದೆ! ಇಲ್ಲ, ಬಸವ ಮಾತ ನಾಡಲಾರದು."

ಅತ್ತ ಸರಿದು ತುಂಬ ಖಿನ್ನನಾಗಿ ಧ್ಯಾನ ಮಾಡುತ್ತ ಕುಳಿತನು. ಅವನಿಗೆ ಏನೂ ತಿಳಿಯಲಿಲ್ಲ. ಮತ್ತೆ ಬಸವನೊಳಗಿನಿಂದ ಧ್ವನಿ ಕೇಳಿಸಿತು: "ವತ್ಸ, ವತ್ಸ". ಅವನು ಹತ್ತಿರ ಹೋದ.

"ಇಲ್ಲ, ಬಸವ ಮಾತನಾಡಲಾರದು," ಎಂದು ಭಾವಿಸಿ, ಹಿಂತಿರುಗಿ ವಿಷಾದದಿಂದ ಕುಳಿತುಕೊಂಡ.

ಮತ್ತೆ ಧ್ವನಿ ಕೇಳಿಸಿತು. ಈಗ ಅವನು ಕಂಡುಹಿಡಿದ, ತನ್ನ ಹೃದಯದಿಂದಲೇ ಧ್ವನಿ ಬರುತ್ತಿತ್ತು. ದೇವರು ತನ್ನೊಳಗೇ ಇರುವನೆಂದು ಅವನಿಗೆ ತಿಳಿಯಿತು. "ನಾನು ಯಾವಾಗಲೂ ನಿನ್ನೊಡನೆ ಇದ್ದೇನೆ" ಎಂಬ ಭಗವದ್ವಾಣಿಯ ಅದ್ಭುತ ಸತ್ಯ ಅವನಿಗೆ ಅರ್ಥವಾಯಿತು. ಬಡ ಗೋವಳನಿಗೆ ಇಡೀ ರಹಸ್ಯ ಅರ್ಥವಾಯಿತು.

ಅನಂತರ ಅವನು ಯೋಗಿಯನ್ನು ನೋಡಲು ಹೋಗುತ್ತಾನೆ. ಯೋಗಿಯು ಅವನನ್ನು ದೂರದಿಂದ ಬರುತ್ತಿರುವಾಗಲೇ ನೋಡಿದ. ಯೋಗಿಯು ದೊಡ್ಡ ಪಂಡಿತ, ಮಹಾತಪಸ್ವಿ. ಈ ಗೋಪಾಲಕನಾದರೂ ದಡ್ಡ, ನಿರಕ್ಷರಕುಕ್ಷಿ. ಆದರೆ ಅವನ ಇಡೀ ದೇಹವೇ ಪರಿವರ್ತನೆಗೊಂಡಂತೆ ಕಾಣುತ್ತಿದೆ, ಸ್ವರ್ಗೀಯ ಜ್ಯೋತಿ ಅವನ ಮುಖದಲ್ಲಿ ಬೆಳಗುತ್ತಿದೆ. ಯೋಗಿಯು ಎದ್ದು ನಿಂತನು.

"ಇದು ಎಂಥ ಬದಲಾವಣೆ? ಇದು ಹೇಗಾಯಿತು?"

"ಸ್ವಾಮಿ, ಇದು ನಿಮ್ಮ ಅನುಗ್ರಹ."

"ಅದು ಹೇಗೆ? ನಾನು ನಿನಗೆ ಅದನ್ನು ತಮಾಷೆಗೆ ಹೇಳಿದೆ."

"ಆದರೆ ನಾನು ಅದನ್ನು ಗಂಭೀರವಾಗಿ ಸ್ವೀಕರಿಸಿದೆ. ನಾನು ಆ ಬಸವನಿಂದಲೇ ನಾನು ಬಯಸಿದುದೆಲ್ಲವನ್ನೂ ಪಡೆದೆ. ಏಕೆ, ದೇವರು ಎಲ್ಲೆಲ್ಲಿಯೂ ಇಲ್ಲವೇನು?"

ಆದ್ದರಿಂದ ಇಲ್ಲಿ ಆ ಬಸವನೇ ಪ್ರತೀಕ. ಆ ವ್ಯಕ್ತಿಯು ಆ ಪ್ರತೀಕವನ್ನೇ ದೇವರೆಂದು ಪೂಜಿಸಿ ಎಲ್ಲವನ್ನೂ ಪಡೆದ. ಆ ತೀವ್ರ ಪ್ರೀತಿ, ಆ ತೀವ್ರ ಬಯಕೆ ಎಲ್ಲವನ್ನೂ ಸಾಧಿಸಿಕೊಡುತ್ತದೆ. ಎಲ್ಲವೂ ನಮ್ಮೊಳಗೇ ಇದೆ. ಬಾಹ್ಯ ಜಗತ್ತು, ಬಾಹ್ಯ ಪೂಜೆ ಅದನ್ನು ಹೊರಪಡಿಸುವುದಕ್ಕೆ ಒಂದು ಸೂಚನೆಯಷ್ಟೆ. ಅದು ಬಲ ಯುತವಾದಾಗ ಒಳಗಿರುವ ದೇವರು ಜಾಗ್ರತನಾಗುತ್ತಾನೆ.

ನಾಮಜಪ, ಪ್ರತೀಕೋಪಾಸನೆ, ಇಷ್ಟನಿಷ್ಠೆ—ಇವೆಲ್ಲ ಭಕ್ತಿಯ ಬಾಹ್ಯ ರೂಪಗಳು. ಇವು ಆ ಶಾಶ್ವತ ಶಕ್ತಿಯು ಜಾಗ್ರತ ವಾಗುವುದಕ್ಕೆ ಸಿದ್ಧತೆಗಳು. ಈ ಎಲ್ಲ ವಿಧಿ ನಿಯಮಗಳನ್ನು ಮೀರಿ ಹೋದ ಮೇಲೆ ನಿಜವಾದ ಆಧ್ಯಾತ್ಮಿಕತೆ ಬರುತ್ತದೆ. ಆಗ ಎಲ್ಲ ನಿಯಮಗಳು ಕಳಚಿಬೀಳುವುವು, ಎಲ್ಲ ರೂಪಗಳು ಮಾಯ ವಾಗುವುವು, ದೇವಸ್ಥಾನ ಚರ್ಚುಗಳೆಲ್ಲ ಉರುಳಿ ಮಣ್ಣು ಪಾಲಾಗುವುವು. ಭಗವಂತನ ಸಂತಾನವನ್ನು ಯಾವ ಮತ ತಾನೇ ಕಟ್ಟಿಹಾಕಬಲ್ಲದು? ಅವನಿಗೆ ಯಾವ ನಿಯಮವಿದೆ? ಅವನು ಅನುಸರಿಸಬೇಕಾದ ಕ್ರಿಯಾವಿಧಿಗಳಾವುವಿವೆ? ಅವನು ಪೂಜಿಸು ವುದಾದರೂ ಯಾರನ್ನು? ಅವನು ಪರಮಾತ್ಮನನ್ನೇ ಪೂಜಿಸುತ್ತಾನೆ. ಪರಮಾತ್ಮನೇ ಅವನಿಗೆ ಬೋಧಿಸುತ್ತಾನೆ. ದೇವಾಲಯಗಳಲ್ಲೆಲ್ಲ ಅತ್ಯಂತ ಶ್ರೇಷ್ಠ ದೇವಾಲಯವಾದ ಮಾನವನ ಆತ್ಮನಲ್ಲಿ ಅವನು ವಾಸಿಸುತ್ತಾನೆ.

ಇದೇ ನಾವು ಪಡೆಯಬೇಕಾದ ಗುರಿ, ಇದೇ ಪರಾಭಕ್ತಿ. ಉಳಿದುವೆಲ್ಲ ಗೌಣ. ಆದರೆ ಅವು ಈ ಸ್ಥಿತಿಯನ್ನು ಪಡೆಯಲು ಆವಶ್ಯಕ. ಅನಂತಾತ್ಮವು ಗ್ರಂಥಗಳು, ಮತಗಳು ಮತ್ತು ಕ್ರಿಯಾ ವಿಧಿಗಳ ಬಂಧನದಿಂದ ಹೊರಬರಲು ಇವು ಸಹಾಯಕವಾಗು ತ್ತವೆ. ಇವು ಕೊನೆಯಲ್ಲಿ ಅದೃಶ್ಯವಾಗಿ ಆತ್ಮನನ್ನು ಹಾಗೆಯೇ ಉಳಿಸುತ್ತವೆ. ಇವು ಅನಂತಕಾಲದಿಂದ ಬಂದ ಮೂಢ ನಂಬಿಕೆಗಳು. ಇದು ನನ್ನ ತಂದೆಯ ಧರ್ಮ, ಇದು ನನ್ನ ದೇಶದ ಧರ್ಮ, ಇದು ನನ್ನ ಗ್ರಂಥ—ಮುಂತಾದುವುಗಳೆಲ್ಲ ತಲೆ

ತಲಾಂತರದಿಂದ ಬಂದ ಮೂಢನಂಬಿಕೆಗಳು. ಇವೆಲ್ಲ ಮಾಯವಾಗುತ್ತವೆ. ಇದು ಒಂದು ಮುಳ್ಳಿನಿಂದ ಮತ್ತೊಂದು ಮುಳ್ಳನ್ನು ತೆಗೆಯುವಂತೆ.

ಅನೇಕ ದೇಶಗಳಲ್ಲಿ, ಎಳೆಯ ಮಗುವಿನಲ್ಲಿಯೂ ಕೂಡ, ಅತ್ಯಂತ ಭಯಂಕರವಾದ, ಬರ್ಬರವಾದ ಮತೀಯ ಭಾವನೆಗಳನ್ನು ತುಂಬುತ್ತಾರೆ. ತಂದೆತಾಯಿಯರು ತಾವು ಮಗುವಿಗೆ ಒಳ್ಳೆಯದನ್ನು ಮಾಡುತ್ತಿರುವೆವು ಎಂದು ಭಾವಿಸುತ್ತಾರೆ. ಸಂಪ್ರದಾಯಪಾಲನೆಯ ಹೆಸರಿನಲ್ಲಿ ಮಗುವಿಗೆ ಹಾನಿಯುಂಟು ಮಾಡುತ್ತಿರುವೆವು ಎಂಬುದು ಅವರಿಗೆ ತಿಳಿಯದು. ಇದೆಲ್ಲ ಸ್ವಾರ್ಥತೆ. ತಮ್ಮ ತೃಪ್ತಿಗಾಗಿ, ಸಮಾಜವನ್ನು ತೃಪ್ತಿಪಡಿಸುವುದಕ್ಕಾಗಿ ಜನರು ಏನು ಮಾಡುವುದಕ್ಕೂ ಸಿದ್ಧರಿರುತ್ತಾರೆ. ತಮ್ಮ ಮಕ್ಕಳನ್ನೇ ಬೇಕಾದರೆ ಕೊಲ್ಲುತ್ತಾರೆ, ತಾಯಂದಿರು ಕುಟುಂಬವನ್ನು ಉಪವಾಸ ಕೆಡುವುತ್ತಾರೆ, ಸಹೋದರರು ಸಹೋದರರನ್ನು ದ್ವೇಷಿಸುತ್ತಾರೆ—ಇದೆಲ್ಲ ಯಾರನ್ನೋ ತೃಪ್ತಿಪಡಿಸುವುದಕ್ಕಾಗಿ.

ಬಹುಪಾಲು ಜನರು ಯಾವುದೋ ಒಂದು ಸಾಂಪ್ರದಾಯಿಕ ಧರ್ಮದಲ್ಲಿ ಜನಿಸಿ ಅದರಿಂದ ಹೊರಬರುವುದೇ ಇಲ್ಲ. ಏಕೆ? ಈ ಸಂಪ್ರದಾಯಗಳು ಆಧ್ಯಾತ್ಮಿಕ ಬೆಳವಣಿಗೆಗೆ ಸಹಾಯಕವಾಗಿರುವವೆ? ಇವುಗಳ ಮೂಲಕ ಪ್ರೀತಿಯ ಅತ್ಯುನ್ನತ ನೆಲೆಯನ್ನು ತಲುಪಬಹುದಾದರೆ, ಬಹುಪಾಲು ಜನರು ಇನ್ನೂ ಯಾವುದಾದರೂ ಸಂಪ್ರದಾಯಕ್ಕೆ ಬದ್ಧರಾಗಿ ನರಳುತ್ತಿರುವರಲ್ಲ ಏಕೆ? ಮತೀಯ ಭಾವನೆಗಳನ್ನು ಮೀರಿಹೋಗಲಿಲ್ಲವಲ್ಲ, ಏಕೆ? ಅವರೆಲ್ಲ ನಾಸ್ತಿಕರು, ಅವರಿಗೆ ಯಾವ ಧರ್ಮವೂ ಬೇಕಿಲ್ಲ.

**ದೇವಸ್ಥಾನ ಮತ್ತು ಚರ್ಚುಗಳಲ್ಲಿ ಮಂಡಿಯೂರುವುದು, ಕೈಮುಗಿಯುವುದು, ಸಾಷ್ಟಾಂಗ ಪ್ರಣಾಮ ಮಾಡುವುದು, ಕಣ್ಣುಮುಚ್ಚುವುದು—ಎಲ್ಲ ಕವಾಯಿತಿನಂತೆ ಯಾಂತ್ರಿಕವಾಗಿ ನಡೆಯುತ್ತದೆ. ಮನಸ್ಸು ಮಾತ್ರ ಬೇರೆಲ್ಲೋ ಇರುತ್ತದೆ. ಇದಾವುದೂ ನಿಜವಾದ ಧರ್ಮವಲ್ಲ.**

ನೀವು ಏನನ್ನು ಬಯಸುತ್ತೀರೊ ನಿಮಗದು ದೊರೆಯುತ್ತದೆ. ಭಗವಂತನು ಎಲ್ಲ ಆಸೆಗಳನ್ನೂ ಪೂರ್ತಿಗೊಳಿಸುತ್ತಾನೆ. ಸಮಾಜದಲ್ಲಿ ಒಂದು ಸ್ಥಾನವನ್ನು ಉಳಿಸಿಕೊಳ್ಳಬೇಕೆಂದು ನೀವು ಬಯಸಿದರೆ, ನಿಮಗದು ದೊರೆಯುತ್ತದೆ. ನಿಮಗೆ ಚರ್ಚು ಬೇಕಾದರೆ ಅದು ಸಿಕ್ಕುತ್ತದೆ, ಆದರೆ ದೇವರು ಸಿಕ್ಕುವುದಿಲ್ಲ. ಈ ಎಲ್ಲ ಚರ್ಚುಗಳು, ಸಂಸ್ಥೆಗಳೆಂಬ ಮಕ್ಕಳಾಟದಲ್ಲಿ ತೊಡಗಿರಬೇಕೆಂದು ನೀವು ಬಯಸಿದರೆ, ಅದರಲ್ಲಿಯೆ ನೀವು ಕೊನೆಯವರೆಗೂ ಇರಬೇಕಾಗುತ್ತದೆ. "ಪಿತೃಗಳನ್ನು ಪೂಜಿಸುವವರು ಪಿತೃಗಳನ್ನು ಪಡೆಯುತ್ತಾರೆ; ಭೂತಾರಾಧಕರು ಭೂತಗಳನ್ನು ಪಡೆಯುತ್ತಾರೆ. ಆದರೆ ದೇವರನ್ನು ಪ್ರೀತಿಸುವವರು ದೇವರನ್ನೇ ಪಡೆಯುತ್ತಾರೆ." ದೇವರನ್ನು ಪ್ರೀತಿಸುವವರು ಅವನೆಡೆಗೆ ಹೋಗುತ್ತಾರೆ, ಇತರರನ್ನು ಪ್ರೀತಿಸುವವರು ಅವರ ಪ್ರೀತಿಯ ವಸ್ತುವನ್ನು ಸೇರುತ್ತಾರೆ.

ಸುಮಾರು ನಾನೂರು ವರ್ಷಗಳ ಹಿಂದೆ ಭಾರತದಲ್ಲಿ ಗುರು ನಾನಕ್ ಎಂಬ ಶ್ರೇಷ್ಠ ಸಂತನಿದ್ದ. ಯೋದ್ಧೃಗಳಾದ ಸಿಖ್ ಜನರ ಬಗ್ಗೆ ನೀವು ಕೇಳಿರಬಹುದು. ಗುರುನಾನಕನು ಸಿಖ್ ಧರ್ಮದ ಸಂಸ್ಥಾಪಕ.

ಒಂದು ದಿನ ಆತನು ಮಹಮ್ಮದೀಯರ ಮಸೀದಿಗೆ ಹೋಗುತ್ತಾನೆ. ಅವರ ದೇಶದಲ್ಲಿಯೇ ಮಹಮದೀಯರೆಂದರೆ ಎಲ್ಲರಿಗೂ ಭಯ. ಕ್ರೈಸ್ತ ದೇಶದಲ್ಲಿಯಂತೆಯೇ ಯಾರೂ ತಮ್ಮ ಧರ್ಮದ ವಿರುದ್ಧ ಒಂದು ಮಾತೂ ಎತ್ತುವಂತಿಲ್ಲ. ಗುರುನಾನಕನು ಮಸೀದಿಯ ಒಳಗೆ ಹೋದನು. ಮಹಮದೀಯರು ಪ್ರಾರ್ಥನೆಗಾಗಿ ನಿಂತಿದ್ದರು. ಅವರು ಸಾಲಾಗಿ ನಿಲ್ಲುತ್ತಾರೆ, ಕೆಳಗೆ ಬಗ್ಗುತ್ತಾರೆ, ಮೇಲೇಳುತ್ತಾರೆ, ಅದೇ ಸಂದರ್ಭದಲ್ಲಿ ಬಾಯಲ್ಲಿ ಏನೊ ಉಚ್ಚರಿಸುತ್ತಾರೆ, ಇದಕ್ಕೆ ಒಬ್ಬ ಮುಂದಾಳಿರುತ್ತಾನೆ. ಗುರುನಾನಕನು ಅಲ್ಲಿಗೆ ಹೋದನು. ಮುಲ್ಲಾನು, "ಗುರುಗಳಿಗೆ ಗುರುವಾದ, ಅತ್ಯಂತ ದಯಾಮಯನಾದ ಭಗವಂತನ ಹೆಸರಿನಲ್ಲಿ" ಎಂದು ಹೇಳಿದಾಗ ಗುರುನಾನಕನು ಮುಗುಳ್ನಕ್ಕು ಹೇಳಿದನು, "ಇದೆಲ್ಲ ಧಾರ್ಮಿಕತೆಯ ಸೋಗು." ಮುಲ್ಲಾನು ಕೋಪೋದ್ರಿಕ್ತನಾಗಿ, "ಯಾಕೆ ನಗುತ್ತಿರುವೆ?" ಎಂದು ರೇಗಿದನು.

"ಏಕೆಂದರೆ ನೀವು ಪ್ರಾರ್ಥಿಸುತ್ತಿಲ್ಲ. ಅದಕ್ಕೇ ನಕ್ಕೆ."

"ಏನು, ಪ್ರಾರ್ಥಿಸುತ್ತಿಲ್ಲವೇ?"

"ಖಂಡಿತ ಇಲ್ಲ, ನಿಮ್ಮಲ್ಲಿ ಪ್ರಾರ್ಥನೆಯೆಂಬುದೇ ಇಲ್ಲ."

ಮುಲ್ಲಾನು ಕೋಪದಿಂದ ಮ್ಯಾಜಿಸ್ಟ್ರೇಟ್ ಹತ್ತಿರ ಹೋಗಿ ದೂರಿತ್ತನು: "ಈ ಪಾಷಂಡನು ನಮ್ಮ ಮಸೀದಿಗೆ ಬಂದು, ನಾವು ಪ್ರಾರ್ಥಿಸುವುದನ್ನು ನೋಡಿ ಅಣಕಿಸುತ್ತಾನೆ. ಇವನಿಗೆ ಒಂದೇ ಶಿಕ್ಷೆಯೆಂದರೆ ಮರಣದಂಡನೆ. ಕೂಡಲೇ ಇವನನ್ನು ಕೊಲ್ಲಿ."

ಗುರುನಾನಕನನ್ನು ಮ್ಯಾಜಿಸ್ಟ್ರೇಟರಿನ ಮುಂದೆ ಕರೆತರಲಾಯಿತು. ಮುಗುಳ್ನಗೆಗೆ ಕಾರಣವನ್ನು ಕೇಳಿದಾಗ ಅವನಂದನು:

"ಅವರು ಪ್ರಾರ್ಥಿಸುತ್ತಿರಲಿಲ್ಲ, ಅದಕ್ಕೆ."

"ಅವರು ಏನು ಮಾಡುತ್ತಿದ್ದರು?" ಮ್ಯಾಜಿಸ್ಟ್ರೇಟ್ ಕೇಳಿದ.

"ಅವರನ್ನು ಇಲ್ಲಿಗೆ ಕರೆಸಿದರೆ ಅವರು ಏನು ಮಾಡುತ್ತಿದ್ದರು ಎಂಬುದನ್ನು ಹೇಳುತ್ತೇನೆ."

ಮುಲ್ಲಾನನ್ನು ಕರೆಸಲಾಯಿತು. ಮ್ಯಾಜಿಸ್ಟ್ರೇಟ್ ಹೇಳಿದ: "ನೋಡು, ಮುಲ್ಲಾ ಬಂದಿದ್ದಾರೆ. ಈಗ ನೀನು ನಕ್ಕಿದ್ದಕ್ಕೆ ಕಾರಣವನ್ನು ವಿವರಿಸು."

ಗುರುನಾನಕ್ ಹೇಳಿದ: "ಮುಲ್ಲಾರಿಗೆ ಕೊರಾನ್ ಗ್ರಂಥವನ್ನು

ಕೊಡಿ (ಪ್ರಮಾಣ ಮಾಡಲು). ಅವರು ಮಸೀದಿಯಲ್ಲಿ "ಅಲ್ಲಾಹ್, ಅಲ್ಲಾಹ್" ಎಂದು ಕೂಗುತ್ತಿರುವಾಗ ಅವರ ಮನಸ್ಸು ಮನೆಯಲ್ಲಿದ್ದ ಕೋಳಿಮರಿಯನ್ನು ಚಿಂತಿಸುತ್ತಿತ್ತು."

ಪಾಪ ಮುಲ್ಲಾ ನಿರುತ್ತರನಾದ. ಅವನು ಇತರ ಎಲ್ಲರಿಗಿಂತ ಹೆಚ್ಚು ಪ್ರಾಮಾಣಿಕನಾಗಿದ್ದ. ತಾನು ಕೋಳಿಮರಿಯನ್ನು ಚಿಂತಿಸುತ್ತಿದ್ದುದು ನಿಜವೆಂದು ಒಪ್ಪಿಕೊಂಡನು. ನಾನಕನಿಗೆ ಬಿಡುಗಡೆಯಾಯಿತು.

ಮ್ಯಾಜಿಸ್ಟ್ರೇಟ್ ಮುಲ್ಲಾನಿಗೆ ಹೇಳಿದ: "ಮತ್ತೆ ಮಸೀದಿಗೆ ಹೋಗಬೇಡಿ. ಅಲ್ಲಿ ಈ ರೀತಿ ಅಪ್ರಾಮಾಣಿಕವಾಗಿ ವರ್ತಿಸುವುದಕ್ಕಿಂತ ಅಲ್ಲಿಗೆ ಹೋಗದಿರುವುದೇ ಒಳ್ಳೆಯದು. ನಿಮಗೆ ಪ್ರಾರ್ಥನೆ ಮಾಡಬೇಕೆನಿಸದೇ ಇದ್ದಾಗ ಅಲ್ಲಿಗೆ ಹೋಗಬೇಡಿ. ಆಷಾಢಭೂತಿತನ ಬೇಡ. ಮನಸ್ಸಿನಲ್ಲಿ ಕೋಳಿಮರಿಯನ್ನು ಚಿಂತಿಸುತ್ತ ದಯಾಮಯ ಮತ್ತು ಆನಂದಮಯ ಭಗವಂತನ ಹೆಸರನ್ನು ಉಚ್ಚರಿಸಬೇಡಿ."

ಮಹಮದೀಯನೊಬ್ಬನು ತೋಟವೊಂದರಲ್ಲಿ ಪ್ರಾರ್ಥಿಸುತ್ತಿದ್ದ. ಅವರು ಪ್ರಾರ್ಥನೆಯನ್ನು ತಪ್ಪದೆ ಮಾಡುತ್ತಾರೆ. ಆ ಸಮಯ ಬಂದ ಕೂಡಲೆ, ಅವರು ಎಲ್ಲೇ ಇರಲಿ, ಪ್ರಾರಂಭಿಸುತ್ತಾರೆ: ನೆಲದ ಮೇಲೆ ಬೀಳುವುದು, ಮೇಲೇಳುವುದು, ಮತ್ತೆ ಬೀಳುವುದು, ಏಳುವುದು—ಹೀಗೆ ಮುಂದುವರಿಯುತ್ತದೆ. ಅವನು ತೋಟದಲ್ಲಿದ್ದಾಗ ಪ್ರಾರ್ಥನೆಯ ಸಮಯ ಬಂತು. ಅವನು ಪ್ರಾರ್ಥಿಸುವುದಕ್ಕಾಗಿ ನೆಲದಮೇಲೆ ಉದ್ದಂಡ ಮಲಗಿದ. ಅದೇ ತೋಟದಲ್ಲಿ ಯುವತಿಯೋರ್ವಳು ತನ್ನ ಪ್ರಿಯತಮನಿಗಾಗಿ ಕಾಯುತ್ತಿದ್ದಳು. ಅವನ ಹತ್ತಿರಕ್ಕೆ ಹೋಗುವ ಆತುರದಲ್ಲಿ ಅವಳು ಇವನು ಮಲಗಿರುವುದನ್ನು ನೋಡದೆ ಅವನ ಮೈಮೇಲೆಯೇ ನಡೆದುಕೊಂಡು ಹೋದಳು. ಆ ಮಹಮದನು ತುಂಬ ಮತಾಂಧನಾಗಿದ್ದ. ಅವನ ದೇಹವನ್ನು ಹೀಗೆ ತುಳಿದಾಗ ಅವನಿಗೆ ಎಂಥ ಕೋಪ ಬಂದಿರಬೇಕೆಂಬುದನ್ನು ನೀವು ಊಹಿಸಬಹುದು. ಅವನಿಗೆ ಆ ಯುವತಿಯನ್ನು ತಕ್ಷಣ ಕೊಲ್ಲಬೇಕೆನಿಸಿತು. ಆ ಯುವತಿ ತುಂಬ ಚುರುಕು, ಅವಳೆಂದಳು : "ನಿಲ್ಲಿಸು. ನೀನೊಬ್ಬ ಮೂರ್ಖ, ಕಪಟಿ."

"ಏನೆಂದೆ! ನಾನು ಕಪಟಿಯೇ?"

"ನಾನು ಮಾನವ ಪ್ರಿಯತಮನನ್ನು ಸಂಧಿಸಲು ಹೋಗುತ್ತಿದ್ದೇನೆ, ನನಗೆ ನೀನಿರುವುದೇ ಕಾಣಿಸಲಿಲ್ಲ. ಆದರೆ ನೀನು ಸ್ವರ್ಗೀಯ ಪ್ರಿಯತಮನನ್ನು ಸಂಧಿಸಲು ಹೋಗುತ್ತಿರುವೆ. ಯುವತಿ ನಿನ್ನ ದೇಹದ ಮೇಲೆ ನಡೆದುಕೊಂಡು ಹೋದುದು ನಿನಗೆ ತಿಳಿಯಬಾರದಿತ್ತು."

## ದೇವರ ಹೃದಯ

ಒಬ್ಬ ವ್ಯಕ್ತಿ ದೇವರ ದರ್ಶನಕ್ಕಾಗಿ ದೇವಾಲಯಕ್ಕೆ ಹೋಗುತ್ತಾನೆ. ದೇವತಾಮೂರ್ತಿಯನ್ನು ನೋಡಿ ಭಕ್ತಿಪರವಶನಾಗುತ್ತಾನೆ. ತಾನು ಪಡೆದುದಕ್ಕೆ ಪ್ರತಿಯಾಗಿ ಏನನ್ನಾದರೂ ನೀಡಬೇಕೆಂದು ಆತ ಭಕ್ತಿಗೀತೆಯನ್ನು ಹಾಡಲು ಪ್ರಾರಂಭಿಸಿದ. ಆ ದೇವಾಲಯದ ಪೂಜಾರಿ ಅಲ್ಲಿಯ ಒಂದು ಕಂಬಕ್ಕೆ ಒರಗಿಕೊಂಡು ನಿದ್ದೆ ಮಾಡುತ್ತಿದ್ದ. ಅವನ ಹೆಸರು ಭೋಬೇಜಿ. ಅವನು ವ್ಯಾಯಾಮ ಪಟು; ಗಿಟಾರ್ ವಾದಕ, ಎರಡು ಹೂಜಿ ಭಂಗಿಯನ್ನು ಒಂದೇ ಬಾರಿಗೆ ಕಬಳಿಸಬಲ್ಲ. ಇಷ್ಟೇ ಅಲ್ಲದೆ ಇನ್ನೂ ಅನೇಕ ಗುಣಗಳಿದ್ದವು. ಇದ್ದಕ್ಕಿದ್ದಂತೆಯೇ ಭಯಂಕರ ಶಬ್ದ ಅವನ ಕರ್ಣಪಟಲವನ್ನು ಅಪ್ಪಳಿಸತೊಡಗಿತು. ಅಮಲಿನ ಪ್ರಭಾವದಿಂದ ಕಲ್ಪಿತವಾದ ಅದ್ಭುತ ಭಾವನಾಲೋಕ ಕಣ್ಮರೆಯಾಗತೊಡಗಿತು.

ಭೋಬೇಜಿ ತನ್ನ ಕೆಂಗಣ್ಣನ್ನು ತೆರೆದು ಬೆಂಕಿ ಉಗುಳುವಂತೆ ಸುತ್ತಲೂ ಹೊರಳಿಸಿದ, ತನ್ನ ಸುಖನಿದ್ರೆಯನ್ನು ಕೆಡಿಸಿದ ಮೂಲಕಾರಣವನ್ನು ಅರಸತೊಡಗಿದ. ತನ್ನ ಬೃಹತ್ ಕಾಯವನ್ನು ಸ್ವಲ್ಪ ಹೊರಳಾಡಿಸಿದ. ದೇವರ ಮುಂದೆ ನಿಂತು ಒಬ್ಬ ವ್ಯಕ್ತಿ ಹಾಡುತ್ತಿರುವುದು ಕಾಣಿಸಿತು. ಅರೆ! ಅದೇನು ಭಾವವೊ! ಉತ್ಸವದಲ್ಲಿ ದೊಡ್ಡ ದೊಡ್ಡ ಕಡಾಯಿಗಳನ್ನು ಉಜ್ಜುವ ಧ್ವನಿಯ ಮಾಧುರ್ಯವನ್ನು ಅವನ ಕರ್ಣಕಠೋರ ಹಾಡಿನಲ್ಲಿ ಅನುಭವಿಸಬಹುದಿತ್ತು. ನಾರದ, ಭರತ, ಹನುಮಂತ, ನಾಯಕ ಮುಂತಾದ ಸಂಗೀತಶಿಖಾಮಣಿಗಳೆಲ್ಲ ನಾಚಿಕೆಯಿಂದ ತಲೆತಗ್ಗಿಸುವಂತಿತ್ತು. ಪೂಜಾರಿಗೆ ಮರ್ಮಾಘಾತವಾದಂತಾಯಿತು.

ಯಾವಾಗಲೂ ಭಕ್ತರಿಗೆ ಹಿಂಸೆಕೊಟ್ಟು ಅಭ್ಯಾಸವಾಗಿದ್ದ ಆತನಿಗೆ ಒಬ್ಬ ಭಕ್ತನಿಂದಲೇ ಹಿಂಸೆಗೊಳಗಾಗುತ್ತಿರುವುದು ಒಂದು ಹೊಸ ಅನುಭವ. ತನ್ನ ಸುರಾಪಾನದ ಸ್ವರ್ಗಸುಖಕ್ಕುಂಟಾದ ಈ ಭಂಗವನ್ನು ಅವನು ಹೇಗೆ ಸಹಿಸಿಯಾನು! ತನ್ನ ಘಟಾಕಾರದ ವಿಶ್ವಂಭರ ಉದರವನ್ನು ಸವರಿಕೊಳ್ಳುತ್ತ ಆ ಪೂಜಾರಿ ಆರ್ಭಟಿಸಿದ: "ಏಯ್, ಶ್ರುತಿ ಲಯಗಳಿಲ್ಲದೆ ಏತಕ್ಕೆ ಹಾಗೆ ಕಿರುಚಿಕೊಳ್ಳುತ್ತಿದ್ದೀಯೆ?" ಭಕ್ತನಿಂದ ಕೂಡಲೇ ಉತ್ತರ ಬಂತು: "ಶ್ರುತಿ ಲಯಗಳ ಗೊಡವೆ ನನಗೇಕೆ? ನಾನು ದೇವರ ಹೃದಯವನ್ನು ಗೆಲ್ಲಲು ಪ್ರಯತ್ನಿಸುತ್ತಿದ್ದೇನೆ." ಪೂಜಾರಿ ಧ್ವನಿಯೇರಿಸಿದ : **"ಏನೆಂದೆ! ದೇವರೇನು ಅಂಥ ಮೂರ್ಖನೇ? ನಿನಗೆ ಹುಚ್ಚು! ನನ್ನ ಹೃದಯವನ್ನೇ ನಿನಗೆ ಗೆಲ್ಲಲಾಗಲಿಲ್ಲ—ದೇವರಿಗೆ ನನಗಿಂತ ಬುದ್ಧಿ ಕಡಮೆ ಅಂದುಕೊಂಡೆಯಾ?"**

**— ಸ್ವಾಮಿ ವಿವೇಕಾನಂದ.**

*ಸ್ಥಳದಾನ:* ದೇವಿ ಆರ್ಟ್ಸ್, ಬೆಂಗಳೂರು